doc-394
T.P-2

(1)

R No KRNN 12 4-11-1974

ಸ್ವರ್ಣ ಮಹೋತ್ಸವ ನೆರವೇರಿದ ಪತ್ರಿಕೆ

in ★ ★ ★ ★ ★
58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಕುಪ್ಪಣ್ಣರಾವ್ ಸಂಪಾದಕರು: ಧರ್ಮಪ್ರಜಾರಮಿತ ಎಂ. ಎಸ್. ಕೃಷ್ಣರಾವ್ [3 ಪೈಸೆ

ನಗರಾಭಿವೃದ್ಧಿ ಸಮಿತಿ, ಮೈಸೂರು

ನಂ. ಬಿ 1. 28-74-75 ತಾ|| 26-10-1974

ನೈಟುಗಳ ಬಹಿರಂಗ ಹರಾಜು

ಮೈಸೂರು ಕಾರಂಜಿ ಟ್ಯಾಂಕ್ ಎರಡನೇ ಹಂತದ ಬಡಾವಣೆಯ (ಕುರುಬಾರಹಳ್ಳಿ ಹತ್ತಿರ) ಕೆಳಕಂಡ ವಾಸಸ್ಥಳದ 28 ತಿರುವು (ಕಾರ್ನರ್) ನಿವೇಶನಗಳನ್ನು 1974 ನೇ ನವೆಂಬರ್ ಮಾಹೆ 9 ರಂದು ಮತ್ತು 10 ರಂದು (ಎರಡು ದಿನಗಳು) ಬೆಳಿಗ್ಗೆ 9-30 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಲಾಗುವುದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲು ನಗರಾಭಿವೃದ್ಧಿ ಸಮಿತಿ ಹರ್ಷಿಸುತ್ತದೆ.

ಈ ನಿವೇಶನಗಳ ಹರಾಜು ಮಾರಾಟವು ನಗರಾಭಿವೃದ್ಧಿ ಸಮಿತಿ ತಿರುವು ಮತ್ತು ವಾಣಿಜ್ಯ (ಕಾರ್ನರ್ ಮತ್ತು ಕಮರ್ಷಿಯಲ್) ನಿವೇಶನಗಳ ಹಂಚಿಕೆ ನಿಬಂಧನೆ (1973) ಪ್ರಕಾರ ಇರುತ್ತದೆ. ಹರಾಜಿನಲ್ಲಿ ಭಾಗವಹಿಸುವವರು ಪಾಲಂಗಡವಾಗಿ ರೂ 1,000-00 ಗಳನ್ನು ಪಾವತಿ ಮಾಡಬೇಕು ಮತ್ತು ಹರಾಜು ಪೂರ್ತಿ ಆತ್ಯಂತ ಹೆಚ್ಚು ಬೊಬಲಗಿನ ಶೇಕಡ 25 ರಷ್ಟನ್ನು ಸ್ಥಳದಲ್ಲೇ ಪಾವತಿ ಮಾಡಬೇಕು. ಚೆಕ್‌ಗಳನ್ನು ಪಡೆಯಲಾಗುವುದಿಲ್ಲ ಯಾವುದೇ ಕಾರಣವನ್ನು ತಿಳಿಸದೆ ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ನಗರಾಭಿವೃದ್ಧಿ ಸಮಿತಿಗೆ ಇರುತ್ತದೆ ವಾಸಸ್ಥಳದ (ಕಾರ್ನರ್) ತಿರುವು ನಿವೇಶನಗಳ ಹರಾಜಿನ ಷರತ್ತುಗಳನ್ನು ನಗರಾಭಿವೃದ್ಧಿ ಸಮಿತಿಯ ಛೇರ್ಮನ್ ಕಛೇರಿಯಿಂದ ಕೆಲಸದ ದಿನಗಳಲ್ಲಿ ಬೆಳಿಗ್ಗೆ 11 ರಿಂದ ಸಂಜೆ 5 ಘಂಟೆಯ ವರೆಗೆ ಪಡೆಯಬಹುದು.

ನಿವೇಶನಗಳ ಹರಾಜನ್ನು "ಆಯಾಯಾ ನಿವೇಶನಗಳ" ಆಧಾರದ ಮೇಲೆ ಮಾಡಲಾಗುವುದು. ನಿವೇಶನಗಳನ್ನು ಕೊಳ್ಳಲು ಅಪೇಕ್ಷಿಸುವವರು ಹರಾಜಿಗೆ ಪೂರ್ವಭಾವಿಯಾಗಿ ನಿವೇಶನಗಳನ್ನು ನೋಡಿಕೊಂಡು ಗೊತ್ತಾದ ಕಾಲಕ್ಕೆ ಸರಿಯಾಗಿ ಹರಾಜು ಸ್ಥಳದಲ್ಲಿ ಹಾಜರಿರಬೇಕೆಂದು ವಿನಂತಿಸಲಾಗಿದೆ

ನಿವೇಶನಗಳ ವಿವರ ಈ ಕೆಳಕಂಡಂತೆ ಇರುತ್ತದೆ

ಕ್ರಮ ಸಂಖ್ಯೆ	ಕಾರ್ನರ್ ನಿವೇಶನಗಳ ಸಂಖ್ಯೆ	ಅಂದಾಜು ಅಳತೆ ಅಡಿಗಳಲ್ಲಿ	ಅಂದಾಜು ಅಳತೆ ಮೀಟರುಗಳಲ್ಲಿ
1	1	125' x 120'	38 1 x 36 . 57
2	1	90' x 120'	27 . 43 x 36 . 57
3	8	80' x 60'	24 . 38 x 15 . 24
4	8	70' x 90'	21 . 33 x 27 . 43
5	10	45' x 60'	13 . 71 x 18 . 28

[ad-venture]

ಸಹಿ/- ಬಿ. ಎನ್. ಕೆಂಗೇಗೌಡ,
ಛೇರ್ಮನ್, ನಗರಾಭಿವೃದ್ಧಿ ಸಮಿತಿ, ಮೈಸೂರು

ಸರಕಾರ ಮತ್ತು ಜಯಪ್ರಕಾಶರು

ಪಾಟ್ನಾ— ಇಂದು ಪಾಟ್ನಾದಲ್ಲಿ ಬೀಹಾರು ಚಳುವಳಿ ಅನುಯಾಯಿಗಳಿಗೂ ಅಹಿಂಸಾತ್ಮಕ ಆಯುಧಪಾಣಿ ಜನರಿಗೂ ಸಮರ ಸಂಭವವಿದೆ – ಹೊರಗಿನ ಪ್ರದರ್ಶಕರು ಬಾರದಂತೆ ಅಡ್ಡಿಗೊಳಿಸಲ್ಪಟ್ಟಿ, 8000 ಕೇಂದ್ರದ ಮೀಸಲು ಮತ್ತು ಸರಕಾರಿ ಮೀಸಲು ಪೋಲೀಸರು ಆಯುಧಪಾಣಿಗಳಾಗಿ ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ನಿಲ್ಲಿಸಲ್ಪಟ್ಟಿದ್ದಾರೆ – ಕೆಲವು ಅಧಿಕಾರಿಗಳು ಕೈಲಿ ಹಗುರ ಮೆರ್ಷಗಳನ್ನು ಹಿಡಿದು ಓಡಾಡುತ್ತಿದ್ದಾರೆ – ದೋಣಿಗಳಲ್ಲಿ ಗಂಗಾ ನದಿ ಹಾದು ಪ್ರದರ್ಶನಕಾರರು ಬಂದಾರೆಂದು ನೋಡಲು ವಿಶೇಷ ಚಟುವಟಿಕೆ ಇದೆ – ಇವೆಲ್ಲ ಕಾರ್ಯಗಳ ಜೊತೆ ಯಾರ ಕಡೆ ಟಿಕೇಟುಗಳಿಲ್ಲದೆ ಬರುತ್ತಿದ್ದವರನ್ನು ಪೋಲೀಸರೂ ಮ್ಯಾಜಿಸ್ಟ್ರೇಟರೂ ಹಿಂದಕ್ಕೆ ಅಟ್ಟುತ್ತಿರುವರು – ಹೀಗಿದ್ದರೂ ಹಲವಾರು ವಿದ್ಯಾರ್ಥಿಗಳೂ ರೈತರೂ ಬಂದು ನಗರದಾದ್ಯಂತ ಶಿಬಿರಗಳಲ್ಲಿದ್ದರೆ ಪೋಲೀಸರು ನಿಷ್ಕರ್ಷೆಯಿಂದ ಅವರನ್ನು ತನ್ನ ದೊಣ್ಣೆಗಳಿಂದ ಓಡಿಸುತ್ತಿರುವರು – ಗಾಂಧಿ ಮೈದಾನದಿಂದ ಭೋರಾಮೋ ಸ್ಥಳಗಳಿಗೆ ಸರಕಾರ ತಡೆ ಹಾಕಿದೆ – 58 ರೈಲುಗಳು ರದ್ದುಮಾಡಲ್ಪಟ್ಟಿವೆ – ಟ್ರಕ್ಕುಗಳೂ ವಾಹನಗಳೂ ಹಿಡಿದು ನಿಲ್ಲಿಸಲ್ಪಟ್ಟಿದೆ – ಜಯಪ್ರಕಾಶರ ದಸ್ತಗಿರಿ ಸಂಭವನವಿದೆ ಎನ್ನಲಾಗಿದೆ – 10 ಸಾವಿರ ಪೋಲೀಸರಿದ್ದರೂ 50000 ಪ್ರದರ್ಶನಕಾರರು ಅವರಿಗೆ ಸಮಸ್ಯೆ ಸೃಷ್ಟಿಸಬಹುದೆನ್ನಲಾಗಿದೆ – ಹೀಗೆಲ್ಲಾ ಇದ್ದರೂ ನಿಶ್ಶಕ್ತರಾಗಿದ್ದರೂ ಎಲ್ಲ ವಿಷಯ ತಿಳಿಯಲು ಪಾಟ್ನಾದಾದ್ಯಂತ ಪ್ರವಾಸ ನಡೆಸಿರುವರು – ಮತ್ತೆ ಸ್ವೈಚ್ಛಿಕೆಯಲ್ಲಿ 1500 ಜನ ಬಂಧಿಸಲ್ಪಟ್ಟಿರುವರು.

●

ಕೊಲ್ಲಾಪುರ— ಕೌಜಿವಡಗಾವಿನಲ್ಲಿ ಪೋಲೀಸರು ಒಂದು ಪಿಸ್ತೂಲು ಕಾರ್ಟಾನೆ ಪತ್ತೆಮಾಡಿ, ಆಲ್ಲಿದ್ದ ಪಿಸ್ತೂಲುಗಳ್ಳ ಚರ ವಸ್ತುಗಳ ಪದಾರ್ಥಗಳನ್ನು ವಶಪಡಿಸಿಕೊಂಡು, ಒಬ್ಬನನ್ನು ಬಂಧಿಸಿದರು.

★ ನವದೆಹಲಿ– ವಿವಾಹ ವಯಸ್ಸನ್ನು ಹೆಚ್ಚಿಸಲು ಆರೋಗ್ಯ ಮತ್ತು ಕುಟುಂಬ ಸಚಿವಾಲಯದ ಸಲಹಾ ಸಮಿತಿಯಲ್ಲಿ ಮಾತುಕತೆ ನಡೆಯುತ್ತಿದೆ.

ರಾಜ್ಯಗಳಲ್ಲಿಟ್ಟಿರುವ ಮೀಸಲು ಪಡೆ

ನವದೆಹಲಿ— ಕೇಂದ್ರದ ಸಿಆರ್‌ಪಿ, ಬಿಎಸ್‌ಎಫ್ ಪಡೆಗಳಿಟ್ಟಿರುವ ರಾಜ್ಯಗಳ ಈ ಬಗ್ಗೆ ಮಾರ್ಚ್ 31 ರಲ್ಲಿ ರೂ 60 ಕೋಟಿ ಕೊಡಬೇಕಾಗಿತ್ತು – ಕರ್ನಾಟಕ ಪಾಲಿನ ಬಾಕಿ ರೂ 32000.

★

ಭಿಕ್ಷುಕರ ಸಹಕಾರ ಸಂಘ

ಅಜಮೀರ್— ಭಿಕ್ಷುಕರ ಸಹಕಾರ ಸಂಘವನ್ನು ಸ್ಥಾಪಿಸಿರುವ ಬಿಸ್ಕತ್ ಫ್ಯಾಕ್ಟರಿಯಲ್ಲಿ ಕಳೆದ 2 ವರ್ಷಗಳಲ್ಲಿ ರೂ 7200 ನಿವ್ವಳ ಲಾಭ ದೊರೆತಿದೆ – ಫ್ಯಾಕ್ಟರಿಯಲ್ಲಿ 65 ಭಿಕ್ಷುಕರನ್ನು ಕೆಲಸಕ್ಕೆನಿಡಲಾಗಿದೆ; ಅವರಿಗೆ ರೂ. 40 ರಿಂದ 155 ವರೆಗೆ ಸಂಬಳ, ಉಚಿತ ಟೀ, ಮತ್ತು ೧ ಸಾರಿ ಬೀಡಿ ಕೊಡಲಾಗುತ್ತಿದೆ – ಅಲ್ಲಿ ದಿನಕ್ಕೆ 1200 ಕೆಜಿ ಬಿಸ್ಕತ್ ತಯಾರಾಗುತ್ತಿದೆ.

❀

ರೂ. 10 ಕೋಟಿ ಬಟ್ಟೆ ಬಿದ್ದಿದೆ

ವಿಜಯವಾಡ– ಆಂಧ್ರಪ್ರದೇಶದ ಅಪೆಕ್ಸ್ ಮತ್ತು ಪ್ರಾಥಮಿಕ ನೈಗೆ ಸಹಕಾರ ಸಂಘಗಳಲ್ಲಿ ರೂ 10 ಕೋಟಿ ಬೆಲೆಯ ಕೈಮಗ್ಗ ಬಟ್ಟೆ ವ್ಯಾಪಾರವಾಗದೆ ಬಿದ್ದಿದೆಯಂತೆ.

●

ಲಂಚಕೋರರ ಬಂಧನ

ಹೈದರಾಬಾದು– ಲಂಚ ಸ್ವೀಕರಿಸುತ್ತಿದ್ದ ಒಬ್ಬ ಪತ್ತೇದಾರಿ ಪೋಲೀಸು ಸಬ್ ಇನ್ಸ್‌ಪೆಕ್ಟರು ಮತ್ತು ಒಬ್ಬ ಪೋಲೀಸು ಪ್ಯಾದೆ ಬಂಧಿಸಲ್ಪಟ್ಟಿರುವರು.

★

ಶ್ರೀ ಶ್ರೀಕಂಠೇಶ್ವರ ಸುಪ್ರಭಾತ

ನಂಜನಗೂಡಿನಲ್ಲಿ ತಾ|| 6 ರಂದು ಶ್ರೀ ಶ್ರೀಕಂಠೇಶ್ವರ ಸುಪ್ರಭಾತದ ಎಂಟನೇ ವಾರ್ಷಿಕೋತ್ಸವ ಏರ್ಪಡಿಸಲಾಗಿದೆ.

★

ಅಗ್ನಿ ಅನಾಹುತ

ಸೆಯೂಲ್– 7 ಅಂತಸ್ತಿನ ಹೋಟೆಲಿನಲ್ಲಾದ ಅಗ್ನಿ ಅನಾಹುತದಲ್ಲಿ 88 ಮಂದಿ ಸತ್ತು 50 ಮಂದಿ ಗಾಯಗೊಂಡರು.

ಮಹಿಳಾ ಬಹಿರಾಕಾಶ ವಿಜ್ಞಾನಿಗಳು

ಹಂಟ್ಸ್‌ವಿಲೆ (ಆಲ್ಬಾಮಾ) - ಬಹಿರಾಕಾಶ ಸಂಚಾರದಲ್ಲಿ 1980 ರ ಹೊತ್ತಿಗೆ ಮಹಿಳಾ ವಿಜ್ಞಾನಿಗಳಿರುವರೆಂದೂ ಇಬ್ಬರು ಪುರುಷ ಬಹಿರಾಕಾಶಯಾಮಿಗಳು ಹೇಳಿದರು

ಹಸಿರು ನಿರ್ಮಾಣಕ್ಕೆ ಸಹಾಯ

ನವದೆಹಲಿ— ವಿಶ್ವ ಬಚಿತಾಲಯವು 74-75 ಕ್ಕೆ ಜೀವವಿಜ್ಞಾನ ಸಂಸ್ಥೆ ಸ್ಥಾಪನೆಯಲ್ಲಿ 11 ರಾಜ್ಯಗಳಿಗೆ 9-07 ಕೋಟಿ ರೂಗಳನ್ನು ನೀಡಿ ವಿಶ್ವಾಸ ಮಾಡಿದೆ — ಅದರಲ್ಲಿ ಕರ್ನಾಟಕಕ್ಕೆ 1-20 ಕೋಟಿ ರೂಗಳು

ಅಗ್ನಿ ಅನಾಹುತ

ನವದೆಹಲಿ— ಐಐಎ ಮಾರುಕಟ್ಟೆಯಲ್ಲಿ ಆದ ಅಗ್ನಿ ಅನಾಹುತದಿಂದ 40 ಹಣ್ಣಿನ ಅಂಗಡಿಗಳು ನಾಶವಾದವು

ಖೈದಿಗಳ ಪರಾರಿ

ಪಾಟ್ನಾ— ಮಂಕಪುರ ಕೇಂದ್ರ ಜೈಲಿನಿಂದ 17 ಮಂದಿ ನೆಕ್ಸಲೈಟರು ಪರಾರಿಯಾದರು - ಅವರಲ್ಲಿ ಇಬ್ಬರನ್ನು ಮತ್ತೆ ಹಿಡಿಯಲಾಯಿತು

ರಚನಾತ್ಮಕ ಕ್ರಾಂತಿ

ನವದೆಹಲಿ— ಪ್ರಧಾನಿ ಇಂದಿರಾರವರು ಒಂದು ಯುವಕ ಮೇಳನದಲ್ಲಿ ಮಾಡಿದ ಭಾಷಣದಲ್ಲಿ, ದೇಶದಲ್ಲಿ ರಚನಾತ್ಮಕ ಕ್ರಾಂತಿಗೆ ಕರೆ ಇತ್ತರು

ಬುದ್ಧನ ಆದರ್ಶ ಪ್ರಕಾಶ

ನವದೆಹಲಿ— 3 ನೇ ಏಷ್ಯಾ ಬೌದ್ಧ ಸಮ್ಮೇಳನವನ್ನು ಉದ್ಘಾಟಿಸುತ್ತಾ ಭಾರತಾಧ್ಯಕ್ಷೆ ಶ್ರೀ ಫಕ್ರುದ್ದೀ ಅಹಮದ್ ರವರು, ಬುದ್ಧನ ಆದರ್ಶಗಳನ್ನು ಪ್ರಶಂಸಿಸಿದರು

ಉಪಾಧ್ಯಾಯರ ಮೇಲೆ ಪ್ರತಿಬಂಧಕ

ಮೈಸೂರು— ಏಡೆಡ್ ಸ್ಕೂಲುಗಳ ಮತ್ತು ಕಾಲೇಜುಗಳ ಉಪಾಧ್ಯಾಯರು ರಾಜಕೀಯದಲ್ಲಿ ಇರುವುದನ್ನೂ ಮತ್ತು ಶಾಸನಸಭೆ ಮತ್ತು ಪಾರ್ಲಿಮೆಂಟು ಚುನಾವಣೆಯಲ್ಲಿ ಸ್ಪರ್ಧಿಸುವುದನ್ನೂ ಸರಕಾರ ಪ್ರತಿಬಂಧಿಸಿದೆ

ಪ್ರವಾಸಿ ಭತ್ಯ

ಬೆಂಗಳೂರು— ವಿದ್ಯಾವಂತ ನಿರುದ್ಯೋಗಿಗಳು ಪ್ರವಾಸಿ ಭತ್ಯ ಸ್ಥಾಪಿಸಿ ನಡೆಸುವ ನವೀನ ಸ್ಕೀಂ ಜಾರಿಗೆ ಬರಲಿದೆ - ಪ್ರವಾಸಿ ಅಭಿವೃದ್ಧಿ ಸಂಸ್ಥೆ ಡೈರೆಕ್ಟರ್ ರವರು ತಿಳಿಸಿದರು

ದಿವ್ಯವಾಣಿ

ತಪ್ಪನ್ನು ಕಂಡುಹಿಡಿಯುವುದು ಸುಲಭ ; ತಪ್ಪು ಮೇಲು ಕಾಣುತ್ತದೆ, ಸರಿಪಡಿಸಬಹುದು ; ಸತ್ಯವು ಆಳದಲ್ಲಿ ಅಡಗಿಕೊಂಡಿರುತ್ತದೆ — ಗೋಥೆ

Help The Gorakshana

— Humanitarian Propoganda Monthly —

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

ವುಡ್‌ಲಾಂಡ್ಸ್

ಅಮೋಘ 7 ನೇ ವಾರ

ಇಮ್ತಿಹಾನ್ ● Imtihan

★ ತನುಜ ★ ವಿನೋದ ಖನ್ನ ★ ಬಿಂದು

ಅಭಿನಯಿಸಿರುವ ಅಮೋಘ ಹಿಂದಿ ವರ್ಣರಂಜಿತ ಕಲಾಕೃತಿ

ನಿರ್ದೇಶನ – ಮದನ್ ಸಿಂಹ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ 3 ಪ್ರದರ್ಶನಗಳು

ಅ ಪೆ ರಾ 1 11 74 ರಿಂದ

ರಾಜಕುಮಾರ್ ಕಲ್ಯಾಣ ಕುಮಾರ್

ಅಭಿನಯಿಸಿರುವ ಅಮೋಘ ಕನ್ನಡ ಚಿತ್ರ

ಭೂ ಕೈ ಲಾ ಸ

ದಿನ 3 ಪ್ರದರ್ಶನಗಳು

SHAKTI SUDHA

A Superb Tonic

Contribute Liberally to the National Defence Fund

Protect the Cow

Edited Printed and Published by Dharmapracharanirata M S Krishna Rao (Proprietor) at the Satvaadi Press, Chamarajapuram Mysore